**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಜೇವರ್ಗಿ.**

ಉಪಸ್ಥಿತರು

**ಶ್ರೀ ನಾಮದೇವ ಕಾಮಣ್ಣ ಸಾಲಮಂಟಪಿ**

ಬಿ.ಎ. ಎಲ್.ಎಲ್ ಬಿ(ಸ್ಪೆಷಲ್)

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.

ಜೇವರ್ಗಿ.

ಆದೇಶದ ದಿನಾಂಕ 16ನೇ ಡಿಸೆಂಬರ್ 2016.

ಎಫ್.ಡಿ.ಪಿ. ಸಂಖ್ಯೆ: 8/2013

**ಅರ್ಜಿದಾರ :** ನಾಗಮ್ಮ ಗಂ ಕರೆಪ್ಪ ಬೆಂಕೋಟಗಿ
( ತಂ. ದಿ. ಸಿದ್ರಾಮಪ್ಪ ಬಿರಾದಾರ)
ವಯಸ್ಸು 47 ವರ್ಷ, ಉದ್ಯೋಗ ಒಕ್ಕಲುತನ ಸಾಃ
ಹಾಲಗತ್ತರಗಾ, ತಾಃ ಜೇವರ್ಗಿ ಜಿ. ಗುಲಬರ್ಗಾ.

( ಶ್ರೀ ಜೆ.ವಿ.ಎಚ್. ವಕೀಲರು)

**- ಃ ವಿರುದ್ದ ಃ-**

**ಎದುರುದಾರರು :** 1. ಚಂದವ್ವ ಗಂ ದಿ ಸಿದ್ರಾಮಪ್ಪ ಬಿರಾದಾರ
ವಯಸ್ಸು 70 ವರ್ಷ, ಉದ್ಯೋಗ ಒಕ್ಕಲುತನ
ಸಾಃ ಹಾಲಗತ್ತರಗಾ, ತಾಃ ಜೇವರ್ಗಿ ಜಿ. ಗುಲಬರ್ಗಾ.
ಮತ್ತು ಇತರರು.

( ಶ್ರೀ ಬಿ.ಬಿ. ವಕೀಲರು)

**ಮಧ್ಯಂತರ ಅರ್ಜಿ ನಂ.7**

**ಅರ್ಜಿದಾರ** ಃ ಶ್ರೀ ಶರಣಗೌಡ ತಂ ಚಂದ್ರಮಪ್ಪ ಕಾಳಗಿ

**-ಃವಿರುದ್ಧಃ-**

**ಎದುರುದಾರ** ಃ ನಾಗಮ್ಮ ತಂ ಕರೆಪ್ಪ ಬೆಂಕೋಟಗಿ

**ಮಧ್ಯಂತರ ಅರ್ಜಿ ನಂಬರ 7 ರ ಮೇಲೆ ಆದೇಶ**

1. 4ನೇ ಎದುದಾರನ ಪರ ವಕೀಲರು ಮಧ್ಯಂತರ ಅರ್ಜಿ 7ನ್ನು ಸಿ.ಪಿ.ಸಿ. ಕಲಂ 151 ರ ಅಡಿಯಲ್ಲಿ ಸಲ್ಲಿಸಿ ಕಮೀಶನರ ವರದಿಯ ಮೇಲೆ ಅರ್ಜಿದಾರರು ತಮ್ಮ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿಕೊಳ್ಳದಂತೆ ತಡೆಗಟ್ಟಬೇಕೆಂದು ವಿನಂತಿಸುತ್ತಾರೆ.

2. ಈ ಅರ್ಜಿಗೆ ಆಧಾರವಾಗಿ 4ನೇ ಎದುರುದಾರ ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿ ತಾನು ಈಗಾಗಲೇ ಕಾನೂನಿನಲ್ಲಿ ಆದ ಬದಲಾವಣೆಯಿಂದ ಪ್ರಾಥಮಿಕ ಡಿಕ್ರಿಯಲ್ಲಿ ಬದಲಾವಣೆ ಮಾಡಿ ಪಕ್ಷಗಾರರ ಹಿಸ್ಸೆಗಳನ್ನು ಮರಹೊಂದಾಣಿಕೆ ಮಾಡಿ ಇನ್ನೊಂದು ಪ್ರಾಥಮಿಕ ಡಿಕ್ರಿ ಬರೆಯುವಂತೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಆಯುಕ್ತರು ತಮ್ಮ ವರದಿಯನ್ನು ಸಲ್ಲಿಸಿದ್ದು ಇರುತ್ತದೆ. ಈಗ ಅರ್ಜಿದಾರರು ಆಯುಕ್ತರ ವರದಿಯ ಆಧಾರದ ಮೇಲಿಂದ ತನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ಳಲು ಪ್ರಯತ್ನಿಸುತಿದ್ದಾರೆ. ಆದ್ದರಿಂದ ಅದನ್ನು ತಡೆಗಟ್ಟಬೇಕೆಂದು ವಿನಂತಿಸುತ್ತಾರೆ.

3. ಅರ್ಜಿದಾರ ಸದರಿ ಅರ್ಜಿಗೆ ತಮ್ಮ ಲಿಖಿತ ತಕರಾರು ಸಲ್ಲಿಸಿ ಎದುರುದಾರನು ಸಲ್ಲಿಸಿದ ಎಲ್ಲಾ ಅಂಶಗಳನ್ನು ಅಲ್ಲಗಳೆಯುತ್ತಾರೆ. 4ನೇ ಎದುರುದಾರನು ತಾತ್ಕಾಲಿಕ ನಿರ್ಬಂಧಕಾಜ್ಞೆ ಕೇಳಲು ಯಾವುದೇ ಹಕ್ಕನು ಹೊಂದಿರುವುದಿಲ್ಲ, ಎದುರುದಾರನು ಕೇವಲ ಅರ್ಜಿದಾರರಿಗೆ ತೊಂದರೆ ಕೊಡಲು ಈ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಎದುರುದಾರನು ಮೇಲ್ನೋಟಕ್ಕೆ ಸಮತ್ರವಾದ ಪ್ರಕರಣದ ಹೊಂದಿರುವುದಿಲ್ಲ, ನ್ಯಾಯದ ತಕ್ಕಡಿ ಸಹಿತ ಎದುರುದಾರನ ಕಡೆ ವಾಲಿರುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ತೀರಸ್ಕರಿಸಿದರೆ ಎದುರುದಾರನಿಗೆ ಯಾವುದೆ ಹಾನಿ ಆಗುವುದಿಲ್ಲ, ಇತರೆ ಎಲ್ಲಾ ಕಾರಣಗಳಿಂದ ಅರ್ಜಿಯನ್ನು ತೀರಸ್ಕರಿಸಬೇಕೆಂದು ವಿನಂತಿಸುತ್ತಾರೆ.

4. ವಾದಿ ಪರ ವಕೀಲರ ವಾದ ಆಲಿಸಿದ್ದೇನೆ. ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ.

5. ಕೆಳಕಂಡ ಅಂಶಗಳು ತೀರ್ಮಾನಿಸುವದು ಅವಶ್ಯಕವೆಂದು ಕಂಡು ಬರುತ್ತದೆ.

1. **ಅರ್ಜಿದಾರ:4ನೇ ಎದುರುದಾರ ತನ್ನ ಅರ್ಜಿಯನ್ನು ಪುರಸ್ಕರಿಸಲು ಸಾಕಷ್ಟು ಕಾರಣಗಳಿವೆ ಎಂಬುದನ್ನು ರುಜುವಾತು ಪಡಿಸುತ್ತಾನೇಯೇ?**
2. **ಯಾವ ಆದೇಶ?**

6. ಮೇಲಿನ ಅಂಶಗಳ ಬಗ್ಗೆ ಕೆಳಕಂಡಂತೆ ಉತ್ತರಿಸಿದ್ದೇನೆ.

ಅಂಶ 1 ಃ ನಕಾರಾತ್ಮಕವಾಗಿ.
ಅಂಶ 2 ಃ ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

7. **ಅಂಶ 1 ಃ-** 4ನೇ ಎದುರುದಾರನು ತಾನು ಈಗಾಗಲೇ ಕಾನೂನಿನಲ್ಲಿ ಆದ ಬದಲಾವಣೆಯಿಂದ ಪ್ರಾಥಮಿಕ ಡಿಕ್ರಿಯಲ್ಲಿ ಬದಲಾವಣೆ ಮಾಡಿ ಪಕ್ಷಗಾರರ ಹಿಸ್ಸೆಗಳನ್ನು ಮರಹೊಂದಾಣಿಕೆ ಮಾಡಿ ಇನ್ನೊಂದು ಪ್ರಾಥಮಿಕ ಡಿಕ್ರಿ ಬರೆಯುವಂತೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಆಯುಕ್ತರು ತಮ್ಮ ವರದಿಯನ್ನು ಸಲ್ಲಿಸಿದ್ದು ಇರುತ್ತದೆ. ಈಗ ಅರ್ಜಿದಾರರು ಆಯುಕ್ತರ ವರದಿಯ ಆಧಾರದ ಮೇಲಿಂದ ತನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ಳಲು ಪ್ರಯತ್ನಿಸುತಿದ್ದಾರೆ. ಆದ್ದರಿಂದ ಅದನ್ನು ತಡೆಗಟ್ಟಬೇಕೆಂದು ವಿನಂತಿಸುತ್ತಾರೆ.

8. ಅರ್ಜಿದಾರರು, 4ನೇ ಎದುರುದಾರನು ತಾತ್ಕಾಲಿಕ ನಿರ್ಬಂಧಕಾಜ್ಞೆ ಕೇಳಲು ಯಾವುದೇ ಹಕ್ಕನು ಹೊಂದಿರುವುದಿಲ್ಲ. ಎದುರುದಾರನು ಕೇವಲ ಅರ್ಜಿದಾರರಿಗೆ ತೊಂದರೆ ಕೊಡಲು ಈ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಎದುರುದಾರನು ಮೇಲ್ನೋಟಕ್ಕೆ ಸಮ್ಮತ್ತವಾದ ಪ್ರಕರಣದ ಹೊಂದಿರುವುದಿಲ್ಲ, ನ್ಯಾಯದ ತಕ್ಕಡಿ ಸಹಿತ ಎದುರುದಾರನ ಕಡೆ ವಾಲಿರುವುದಿಲ್ಲ. ಒಂದು ವೇಳೆ

ಈ ಅರ್ಜಿಯನ್ನು ತೀರಸ್ಕರಿಸಿದರೆ ಎದುರುದಾರನಿಗೆ ಯಾವುದೆ ಹಾನಿ ಆಗುವುದಿಲ್ಲ, ಇತರೆ ಎಲ್ಲಾ ಕಾರಣಗಳಿಂದ ಅರ್ಜಿಯನ್ನು ತೀರಸ್ಕರಿಸಬೇಕೆಂದು ಅರ್ಜಿದಾರರು ವಿನಂತಿಸುತ್ತಾರೆ.

9. ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿ ನೋಡಲಾಗಿ 4ನೇ ಎದುರುದಾರನು ವಾದಿಯರ ಕುಟುಂಬಕ್ಕೆ ಮತ್ತು ದಾವಾ ಆಸ್ತಿಗೆ ಯಾವುದೆ ರೀತಿಯ ಸಂಬಂಧ ಹೊಂದಿರುವುದಿಲ್ಲ ಅಂತಾ ಕಂಡು ಬರುತ್ತದೆ. ಕಾನೂನಿನಲ್ಲಿಯಾದ ಬದಲಾವಣೆಯಿಂದ ಪಾಲು ಹಿಸ್ಸೆಗಳಲ್ಲಿ ಮರಹೊಂದಾಣಿಕೆ ಮಾಡಿ ಇನ್ನೊಂದು ಪ್ರಾಥಮಿಕ ಡಿಕ್ರಿ ಬರೆಯಬೇಕೆಂದು ಕೇಳಲು ಆತನಿಗೆ ಯಾವುದೆ ಹಕ್ಕು ಇರುವುದಿಲ್ಲ, 4ನೇ ಎದುರುದಾರನು 3ನೇ ಎದುರುದಾರರ ಗಂಡನಿದ್ದು, ಆತನು 3ನೇ ಎದುರುದಾರರಿಂದ ದಾವಾ ಆಸ್ತಿ ಸರ್ವೆ ನಂ.47ಃ1 ನ್ನು ಖರೀದಿಸಿದ್ದು ಸದರಿ ಖರೀದಿಯು ವಾದಿಯ ಹಿಸ್ಸೆಯ ಮೇಲೆ ಬಂಧನಕಾರಕ ಇರುವುದಿಲ್ಲವೆಂದು ಈ ನ್ಯಾಯಾಲಯವು ಅಸಲ ದಾವಾ ಸಂಖ್ಯೆ 138ಃ2012 ರಲ್ಲಿ ಅಭಿಪ್ರಾಯವನ್ನು ಪಟ್ಟಿದ್ದು ಇರುತ್ತದೆ. ನ್ಯಾಯಾಲಯದ ಆಯುಕ್ತರು ಸಲ್ಲಿಸಿದ ವರದಿಯ ಆಧಾರದ ಮೇಲೆ ಅರ್ಜಿದಾರರು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಹಕ್ಕನ್ನು ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆಂದು ಮೇಲ್ನೋಟಕ್ಕೆ ತೋರಿಸುವ ಯಾವುದೆ ಆಧಾರಗಳು ಈ ಸಂದರ್ಭದಲ್ಲಿ ಕಂಡುಬಂದಿರುವುದಿಲ್ಲ, ಆದ್ದರಿಂದ ಈ ಅರ್ಜಿಯನ್ನು ತೀರಸ್ಕರಿಸಿದರೆ 4ನೇ ಎದುರುದಾರನಿಗೆಯಾವುದೆ ಹಾನಿ ವ ಲುಕ್ಸಾನ ಉಂಟಾಗುವುದಿಲ್ಲ. ಆದ್ದರಿಂದ 1ನೇ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. **ಅಂಶ 2ಃ-** ಮೇಲಿನ ಚರ್ಚೆಯಿಂದ ಈ ಕೆಳಗಿನಂತೆ ಆದೇಶ ಮಾಡಿದ್ದೇನೆ.

# ಆದೇಶ

**ಅರ್ಜಿದಾರಃ4ನೇ ಎದುರುದಾರ ಸಿಪಿಸಿ ಕಲಂ 151ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ. 7 ನ್ನು ಈ ಮೂಲಕ ಖರ್ಚಿನೊಂದಿಗೆ ತೀರಸ್ಕರಿಸಲಾಗಿದೆ.**

( ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೇಲೆ ಉಕ್ತಲೇಖನ ಕೊಟ್ಟು , ಆತ ಬೆರಳಚ್ಚು ಮಾಡಿದ ನಂತರ ತಪ್ಪಿದಲ್ಲಿ ತಿದ್ದಿ ಇವತ್ತು ದಿನಾಂಕ 16ನೇ ಡಿಸೆಂಬರ್ 2016 ರಂದು ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ನಾಮದೇವ ಕಾಮಣ್ಣ ಸಾಲಮಂಟಪಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಜೇವರ್ಗಿ.